**Akashvani : Bangalore**
**National Bulletin In Kannada**
**05.08.2024 / 13.10 hrs**

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**05.08.2024 / 13.10 hrs**

<><*<><>*><>

ಮುಖ್ಯಾಂಶಗಳು

೧. ಫಿಜಿ ತಲುಪಿದ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪಾಧ್ಯಕ್ಷ ವಿಲಿಯಮ್ ಗವೋಕಾರಿಂದ ಸ್ವಾಗತ

೨. ಗ್ರಾಮೀಣ ಪ್ರದೇಶದಲ್ಲಿ ಕೃಷಿ ವಲಯಕ್ಕೆ ನೀಡಿರುವ ಸಾಲದ ಮೌಲ್ಯ ೨೦೨೪ ರಲ್ಲಿ ೨೫.೪೮ ಲಕ್ಷ ಕೋಟಿ ರೂಪಾಯಿಗಳಿಗೆ ಏರಿಕೆ - ಸಚಿವ ಪಂಕಜ್ ಚೌಧರಿ

೩. ಜಮ್ಮು-ಕಾಶ್ಮೀರದ ೩೭೦ನೇ ವಿಧಿ ರದ್ಧತಿಗೆ ೫ ವರ್ಷ ; ದಿನದ ಮಟ್ಟಿಗೆ ಅಮರನಾಥಯಾತ್ರೆ ಸ್ಥಗಿತ

೪. ಬೆಂಗಳೂರು ಕೆಫೆ ಸ್ಫೋಟ ಪ್ರಕರಣ ; ಶಂಕಿತ ಭಯೋತ್ಪಾದಕರಿಂದ ಸ್ಥಳ ಮಹಜರು ನಡೆಸಿದ ಎನ್ಐಎ

೫. ಪ್ಯಾರಿಸ್ ಒಲಿಂಪಿಕ್ಸ್ : ಟೆಬಲ್ ಟೆನಿಸ್ ಮಹಿಳಾ ತಂಡ ವಿಭಾಗದ ೧೬ರ ಸುತ್ತಿನಲ್ಲಿ ಭಾರತ-ರೊಮೇನಿಯಾ ಹಣಾಹಣಿ

<><*<><>*><>

ಮೂರು ದೇಶಗಳ ಪ್ರವಾಸದ ಅಂಗವಾಗಿ ದೆಹಲಿಯಿಂದ ನಿನ್ನೆ ರಾತ್ರಿ ಪ್ರಯಾಣ ಬೆಳೆಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು, ಇಂದು ಬೆಳಿಗ್ಗೆ ಫಿಜಿ ತಲುಪಿದ್ದಾರೆ. ರಾಷ್ಟ್ರಪತಿ ಅವರನ್ನು ಫಿಜಿಯ ಉಪಾಧ್ಯಕ್ಷ ವಿಲಿಯಮ್ ಗವೋಕಾ, ಹಾಗೂ ಫಿಜಿಯಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಪಿ.ಎಸ್. ಕಾರ್ತಿಕೆಯನ್ ಸ್ವಾಗತಿಸಿದರು. ಭಾರತದ ರಾಷ್ಟ್ರಪತಿಯೊಬ್ಬರು ಫಿಜಿ ಮತ್ತು ತಿಮೋರ್ ಲೆಸ್ಟೆಗೆ ನೀಡುತ್ತಿರುವ ಮೊದಲ ಭೇಟಿ ಇದಾಗಿದೆ. ಫಿಜಿಯಲ್ಲಿ ಅವರು, ಫಿಜಿ ರಾಷ್ಟ್ರಪತಿ ಕೆಟೊನಿವೆರ್ ಹಾಗೂ ಪ್ರಧಾನಿ ಸಿತಿವೆನಿ ರಬುಕಾ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದು, ಫಿಜಿ ಸಂಸತ್ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಬಳಿಕ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಲಿದ್ದಾರೆ. ಫಿಜಿ ಬಳಿಕ ೮ ಹಾಗೂ ೯ ರಂದು ನ್ಯೂಜಿಲೆಂಡ್ ಹಾಗೂ ೧೦ ರಂದು ತಿಮೋರ್ ಲೆಸ್ಟೆ ದೇಶಗಳಿಗೆ ಭೇಟಿ ನೀಡಲಿರುವ ರಾಷ್ಟ್ರಪತಿಯವರು, ಭಾರತದೊಂದಿಗೆ ಆ ದೇಶಗಳ ನಡುವಿನ ಬಾಂಧವ್ಯ ಬಲವರ್ಧಿಸುವ ಬಗ್ಗೆ ಅಲ್ಲಿನ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಇದಲ್ಲದೇ ಅಲ್ಲಿರುವ ಭಾರತೀಯ ಸಮುದಾಯದ ಜೊತೆ ವಿಶೇಷ ಸಂವಾದ ನಡೆಸುವ ಕಾರ್ಯಕ್ರಮವಿದೆ.

<><*<><>*><>

ಜಮ್ಮು ಮತ್ತು ಕಾಶ್ಮೀರದಲ್ಲಿ ಇಂದು ೩೭೦ನೇ ವಿಧಿ ರದ್ದುಗೊಳಿಸಲಾದ ಐದನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಭದ್ರತಾ ಅಂಶಗಳನ್ನು ಪರಿಗಣಿಸಿದ ಅಧಿಕಾರಿಗಳು  ದಿನದ ಮಟ್ಟಿಗೆ ಅಮರನಾಥ ಯಾತ್ರೆಯನ್ನು ಸ್ಥಗಿತಗೊಳಿಸಿದ್ದಾರೆ. ಗುಪ್ತಚರ ಮಾಹಿತಿಯ ಹಿನ್ನೆಲೆಯಲ್ಲಿ ಭಗವತಿ ನಗರ ಮೂಲ ಶಿಬಿರದಿಂದ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ನಮ್ಮ ಜಮ್ಮು ಬಾತ್ಮೀದಾರರು ವರದಿ ಮಾಡಿದ್ದಾರೆ. ಅಖನೂರ್ ಮತ್ತು ಜಮ್ಮುವಿನ ಗಡಿ ಭಾಗಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಏತನ್ಮಧ್ಯೆ, ವಿಧಿ ೩೭೦  ರದ್ದುಗೊಳಿಸಿದ ವಾರ್ಷಿಕೋತ್ಸವದ ಸ್ಮರಣಾರ್ಥ ಬಿಜೆಪಿ ಆರ್.ಎಸ್. ಪುರದಲ್ಲಿ ಬೃಹತ್ ರಾಲಿ ಆಯೋಜಿಸಿದ್ದು, ಇದರಲ್ಲಿ ಪಕ್ಷದ ಮುಖಂಡ ಮತ್ತು ಕೇಂದ್ರ ಸಚಿವ ಜಿ. ಕಿಶನ್ ರೆಡ್ಡಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

<><*<><>*><>

ಬೆಂಗಳೂರು ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಶಂಕಿತ ಭಯೋತ್ಪಾದಕರನ್ನು ರಾಷ್ಟ್ರೀಯ ಗುಪ್ತಚರ ಸಂಸ್ಥೆ -ಎನ್ಐಎ ಇಂದು ಘಟನಾ ಸ್ಥಳಕ್ಕೆ ಕರೆತಂದಿದೆ. ಏಪ್ರಿಲ್ ೧ ರಂದು ಸ್ಫೋಟ ಸಂಭವಿಸಿದ ಬೆಂಗಳೂರಿನ ಕೆಫೆಯ ಸುತ್ತಲೂ ೫೦ ಕ್ಕೂ ಹೆಚ್ಚು ಪೊಲೀಸರು ಮತ್ತು ಅಧಿಕಾರಿಗಳ ಬಿಗಿಬಂದೋಬಸ್ತ್ ನಡುವೆ, ಘಟನಾ ಸ್ಥಳದ ಮಹಜರು ನಡೆಸಲಾಗಿದ್ದು, ಸಾರ್ವಜನಿಕರ ಸಂಚಾರವನ್ನು ರದ್ದುಗೊಳಿಸಲಾಗಿದೆ. ಪೊಲೀಸ್ ಮೂಲಗಳ ಪ್ರಕಾರ, ಘಟನೆ ನಡೆದ ಐದು ತಿಂಗಳ ನಂತರ ಎನ್ಐಎ, ಏಪ್ರಿಲ್ ೧೨ ರಂದು ಬಂಧಿಸಿದ್ದ ಶಂಕಿತ ಭಯೋತ್ಪಾದಕ ಮುಸ್ಸಾವಿರ್ ಹುಸೇನ್ ಶಾಜಿಬ್ ಮತ್ತು ರೂವಾರಿ ಅಬ್ದುಲ್ ಮಥೀನ್ ತಾಹಾನನ್ನು ಕೆಫೆಗೆ ಕರೆತಂದಿದ್ದಾರೆ. ಈ ಮಹಜರು ಪ್ರಕ್ರಿಯೆ ಭಾರತೀಯ ಸಾಕ್ಷ್ಯ ಕಾಯ್ದೆಯ ಸೆಕ್ಷನ್ ೭ ಮತ್ತು ೯ರ ಅಡಿಯಲ್ಲಿ ಬರುವ ಸಂದರ್ಭ, ಕಾರಣ ಅಥವಾ ಸತ್ಯಗಳ ಪರಿಣಾಮದ ಪುರಾವೆಯಾಗಿ ಕಾರ್ಯನಿರ್ವಹಿಸುತ್ತದೆ. ಇದು ಅಪರಾಧದ ದೃಶ್ಯದಲ್ಲಿ ತನಿಖಾಧಿಕಾರಿಯು ಗಮನಿಸುವ ಸಂಗತಿಗಳು ಮತ್ತು ವಸ್ತು ಸ್ಥಿತಿಯ ವಿವರಣೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

<><*<><>*><>

ನವದೆಹಲಿಯಲ್ಲಿಂದು ಉನ್ನತ ಮಟ್ಟದ ತ್ರಿ-ಸೇವಾ  ಆರ್ಥಿಕ ಸಮಾವೇಶ ಆರಂಭಗೊಂಡಿದೆ.  ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಅವರು, ಸಮಾವೇಶದ ಅಧ್ಯಕ್ಷತೆ ವಹಿಸಿದ್ದಾರೆ. ಸಶಸ್ತ್ರ ಪಡೆಗಳ ಆರ್ಥಿಕ ವಿಷಯಗಳಲ್ಲಿ ಒಗ್ಗಟ್ಟು ಮತ್ತು ಸಹಕಾರ ಹೊಂದುವ ಉದ್ದೇಶ ಸಮ್ಮೇಳನದ್ದಾಗಿದೆ. ಸಮಾವೇಶದಲ್ಲಿ ರಕ್ಷಣಾ ಸಚಿವಾಲಯದ ಹಿರಿಯ ಅಧಿಕಾರಿಗಳೊಂದಿಗೆ ಕಂಟ್ರೋಲರ್ ಜನರಲ್ ಡಿಫೆನ್ಸ್ ಅಕೌಂಟ್ಸ್‌ನ ಅಧಿಕಾರಿಗಳೂ ಪಾಲ್ಗೊಂಡಿದ್ದಾರೆ. ಸಮಾವೇಶದಲ್ಲಿ ರಕ್ಷಣಾ ಆರ್ಥಿಕತೆಯಲ್ಲಿ ವಿವಿಧ ಪಾಲುದಾರರ ದೃಷ್ಟಿಕೋನಗಳನ್ನು ಅರ್ಥಮಾಡಿಕೊಳ್ಳುವ ಕುರಿತಂತೆ ಮತ್ತು ರಕ್ಷಣಾ ಖರೀದಿಯಲ್ಲಿ ಎದುರಾಗುವ ಸವಾಲುಗಳಿಗೆ ಪರಿಹಾರ ಕುರಿತಂತೆ ಚರ್ಚೆ ನಡೆಯುವ ನಿರೀಕ್ಷೆಯಿದೆ.

<><*<><>*><>

ಕೇರಳದ ವಯನಾಡಿನಲ್ಲಿ ಸಂಭವಿಸಿದ ಭೂಕುಸಿತ ದುರಂತಕ್ಕೆ ಸಂಬಂಧಿಸಿದಂತೆ ರಕ್ಷಣಾ ಕಾರ್ಯ ಮುಂದುವರೆದಿದ್ದು, ನಿನ್ನೆ ರಾತ್ರಿ ಗುರುತು ಸಿಗದ ೮ ಮೃತದೇಹಗಳನ್ನು ಪುತ್ತುಮಲಾದಲ್ಲಿ ಹೊರ ತೆಗೆಯಲಾಗಿದೆ. ಈವರೆಗೆ ಈ ದುರಂತದಲ್ಲಿ ಒಟ್ಟಾರೆ ೩೮೭ ಜನರು ಮೃತಪಟ್ಟಿದ್ದು, ಇನ್ನು ೧೮೦ ಜನ ಕಣ್ಮರೆಯಾಗಿದ್ದಾರೆ. ೧ ಸಾವಿರದ ೫೦೦ಕ್ಕೂ ಹೆಚ್ಚು ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಪೊಲೀಸ್, ಅಗ್ನಿಶಾಮಕ ಸಿಬ್ಬಂದಿ ಹಾಗೂ ಸ್ವಯಂ ಸೇವಕರು ತೀವ್ರ ಭೂಕುಸಿತ ಪ್ರದೇಶಗಳಾದ ಚುರಲ್ಮಲ, ವೆಲಾರಿಮಲ, ಮುಂಡಕ್ಕೈ ಮತ್ತು ಪುಂಚಿರಿಮಡೊಮ್‌ನಲ್ಲಿ ಶೋಧ ಕಾರ್ಯಾಚರಣೆ ಮುಂದುವರಿಸಿದ್ದಾರೆ. ಪರಿಹಾರ ಶಿಬಿರ ಹಾಗೂ ಪರಿಹಾರ ವಿತರಣಾ ಕೇಂದ್ರಗಳಾಗಿ ನಿರ್ವಹಿಸುತ್ತಿರುವ ಶಾಲೆಗಳನ್ನು ಹೊರತುಪಡಿಸಿ ವಯನಾಡು ಜಿಲ್ಲೆಯ ಉಳಿದೆಲ್ಲ ಶಾಲೆಗಳು ಇಂದಿನಿಂದ ಪುನರಾರಂಭಗೊಳ್ಳಲಿವೆ ಎಂದು ಜಿಲ್ಲಾಡಳಿತ ತಿಳಿಸಿದೆ. ಇದರ ನಡುವೆ ಹೆಚ್ಚಿನ ರಕ್ಷಣಾ ಸಿಬ್ಬಂದಿ ಮತ್ತು ೪ ವಿಶೇಷ ತರಬೇತಿ ಪಡೆದ ಶ್ವಾನಗಳನ್ನು ಶೋಧ ಕಾರ್ಯಾಚರಣೆಯಲ್ಲಿ ಸಹಕರಿಸಲು ಮೀರತ್‌ನಿಂದ ಕರೆತರಲಾಗುವುದು ಎಂದು ಕೇರಳ ಸಚಿವ ಕೆ. ರಾಜನ್ ತಿಳಿಸಿದ್ದಾರೆ.

<><*<><>*><>

ಮಹಾರಾಷ್ಟ್ರದ ಪುಣೆಯಲ್ಲಿ ಇನ್ನೂ ೭ ಮಂದಿ ಝೀಕಾ ವೈರಾಣು ಸೋಂಕಿತರಾಗಿರುವುದಾಗಿ ವರದಿಯಾಗಿದೆ. ಈ ಏಳುಮಂದಿಯ ಪೈಕಿ ಐದು ಮಂದಿ ಗರ್ಭಿಣಿ ಮಹಿಳೆಯರು, ಓರ್ವ ೧೮ ವರ್ಷದ ಯುವಕ ಹಾಗೂ ೪೦ ವರ್ಷದ ಓರ್ವ ವ್ಯಕ್ತಿ ಇದ್ದು, ಇವರುಗಳ ನಗರದ ಕಾತ್ರಾಜ್ ಮತ್ತು ಕೋಂಡವಾ ಪ್ರದೇಶಗಳಿಗೆ ಸೇರಿದವರಾಗಿದ್ದಾರೆ. ಪುಣೆ ಜಿಲ್ಲೆಯಲ್ಲಿ ಇದುವರೆಗೂ ೭೨ ಮಂದಿ ಝೀಕಾ ವೈರಾಣು ಸೋಂಕಿತರಾಗಿದ್ದಾರೆಂದು ಜಿಲ್ಲಾ ಆರೋಗ್ಯ ಇಲಾಖೆ ವರದಿ ಮಾಡಿದೆ.

<><*<><>*><>

ಬಾಂಗ್ಲಾದೇಶದಲ್ಲಿ ಪ್ರಸ್ತುತ ಗಲಭೆಯ ವಾತಾವರಣ ಇರುವ ಹಿನ್ನೆಲೆಯಲ್ಲಿ ವಿದೇಶಾಂಗ ಸಚಿವಾಲಯ ಭಾರತೀಯ ನಾಗರಿಕರಿಗೆ ಮಾರ್ಗಸೂಚಿ ಬಿಡುಗಡೆಗೊಳಿಸಿದ್ದು, ಮುಂದಿನ ಸೂಚನೆಯವರೆಗೆ ಬಾಂಗ್ಲಾದೇಶಕ್ಕೆ ತೆರಳದಂತೆ ಸಲಹೆ ನೀಡಿದೆ. ಈಗಾಗಲೇ ಬಾಂಗ್ಲಾದೇಶದಲ್ಲಿರುವ ಭಾರತೀಯರು ತೀವ್ರ ಎಚ್ಚರಿಕೆಯಿಂದ ಇದ್ದು, ತಮ್ಮ ಚಲನ-ವಲನಗಳನ್ನು ನಿಯಂತ್ರಣದಲ್ಲಿಡುವಂತೆ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಹಾಗೆಯೇ ಢಾಕಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಯೊಂದಿಗೆ ಅವರು, ನಿರಂತರ ಸಂಪರ್ಕದಲ್ಲಿರುವಂತೆ ತಿಳಿಸಿರುವ ಸಚಿವಾಲಯ +೮೮೦೧೯೫೮೩೮೩೭೭೯, +೮೮೦೧೯೫೮೩೮೩೭೮೦, +೮೮೦೧೯೩೭೪೦೦೫೯೧, ತುರ್ತು ದೂರವಾಣಿ ಸಂಖ್ಯೆಗಳನ್ನು ಒದಗಿಸಿದೆ.

<><*<><>*><>

ಆಕಾಶವಾಣಿಯ ದ್ವಿಭಾಷಾ ನೇರ ಫೋನ್ ಇನ್ ಕಾರ್ಯಕ್ರಮ ಪಬ್ಲಿಕ್ ಸ್ಪೀಕ್‌ನಲ್ಲಿ ಇಂದು ರಾತ್ರಿ ೯.೩೦ಕ್ಕೆ ಕೌಶಲ್ಯಪೂರ್ಣ ಭಾರತಕ್ಕಾಗಿ ಸರ್ಕಾರದ ಪ್ರಯತ್ನಗಳು ಎಂಬ ವಿಷಯ ಕುರಿತ ಚರ್ಚೆ ಪ್ರಸಾರವಾಗಲಿದೆ. ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಕಾರ್ಯದರ್ಶಿ ಅತುಲ್ ಕುಮಾರ್ ತಿವಾರಿ ಮತ್ತು ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಕಾರ್ಪೋರೇಷನ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಎನ್‌ಎಸ್‌ಡಿಸಿ ಇಂಟರ್ನ್ಯಾಷನಲ್‌ನ ಎಂ.ಡಿ. ವೇದ ಮಣಿ ತಿವಾರಿ ಅವರುಗಳು ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಭಾರತ ಸರ್ಕಾರದಿಂದ ಒದಗಿಸಲ್ಪಡುವ ವಿವಿಧ

ಕೌಶಲ್ಯಾಭಿವೃದ್ಧಿ ಅವಕಾಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮತ್ತು ಅವುಗಳಿಗೆ ಯಾವರೀತಿ ಪ್ರವೇಶ ಪಡೆಯಬಹುದೆಂಬ ಕುರಿತಂತೆ ಕೇಳುಗರು ಸ್ಟುಡಿಯೋದಲ್ಲಿ ಉಪಸ್ಥಿತರಿರುವ ತಜ್ಞರನ್ನು ಕಾರ್ಯಕ್ರಮದ ಸಮಯದಲ್ಲಿ ಕೇಳಬಹುದಾಗಿದೆ. ಪ್ರಶ್ನೆಗಳನ್ನು ಕೇಳಲು ಡಯಲ್ ಮಾಡಬೇಕಾದ ದೂರವಾಣಿ ಸಂಖ್ಯೆಗಳು ಹೀಗಿವೆ. ೦೧೧ - ೨೩೪೨೧೦೫೦ ಮತ್ತು ೦೧೧ - ೨೩೩೧೪೪೪೪. ಕೇಳುಗರು ವಾಟ್ಸಾಪ್ ಸಂಖ್ಯೆಗೂ ತಮ್ಮ ಸಂದೇಹಗಳನ್ನು ಕಳಿಸಬಹುದಾಗಿದೆ ಅಥವಾ hಚಿshಣಚಿg ೦೦sಞ೦iಡಿ ನೊಂದಿಗೆ ಎಕ್ಸ್ ನಲ್ಲಿ ಪ್ರಶ್ನೆಗಳನ್ನು ಪೋಸ್ಟ್ ಮಾಡಬಹುದಾಗಿದೆ.

<><*<><>*><>

ಹರಿಯಾಣಾ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರು ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆಯಲ್ಲಿ ಎಲ್ಲಾ ಬೆಳೆಗಳನ್ನು ಖರೀದಿಸುವುದಾಗಿ ಪ್ರಕಟಿಸಿದ್ದಾರೆ. ಕುರುಕ್ಷೇತ್ರದಲ್ಲಿ ಬಿಜೆಪಿಯ ವಿಜಯ್ ಶಂಖನಾದ್ ರಾಲಿ ಉದ್ದೇಶಿಸಿ ಮಾನಾಡಿದ ಅವರು, ರಾಜ್ಯಸರ್ಕಾರ ಪ್ರಸಕ್ತ ೧೪ ಬೆಳೆಗಳನ್ನು ಖರೀದಿಸುತ್ತಿದೆ ಎಂದರು. ಬಾಕಿ ಇರುವ ೧೩೩ ಕೋಟಿ ರೂಪಾಯಿ ಕಾಲುವೆ ಜಲ ನೀರಾವರಿ ಶುಲ್ಕಗಳನ್ನು ಕೂಡಾ ರದ್ದುಪಡಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಅವರು ಹೇಳಿದರು.

<><*<><>*><>

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿಂದು ಪುರುಷರ ಬ್ಯಾಡ್ಮಿಂಟನ್‌ನ ಕಂಚಿನ ಪದಕಕ್ಕಾಗಿ ಭಾರತದ ಲಕ್ಷ್ಯಸೇನ್, ಮಲೇಷಿಯಾದ ಜಿ ಜಿಯಾ ಲಿ, ಅವರೊಂದಿಗೆ ಸೆಣಸಲಿದ್ದಾರೆ. ಸಂಜೆ ೬ ಗಂಟೆಗೆ ನಡೆಯಲಿರುವ ಪಂದ್ಯದಲ್ಲಿ ಅವರು, ದೇಶಕ್ಕೆ ೪ನೇ ಪದಕ ತಂದುಕೊಡುವ ಗುರಿಯೊಂದಿಗೆ ಕಣಕ್ಕಿಳಿಯುತ್ತಿದ್ದಾರೆ. ಟೆಬಲ್ ಟೆನಿಸ್‌ನಲ್ಲಿ ಭಾರತೀಯ ಮಹಿಳಾ ತಂಡ ೧೬ರ ಸುತ್ತಿನ ಪಂದ್ಯದಲ್ಲಿ ರೊಮೆನಿಯಾ ತಂಡವನ್ನು ಎದುರಿಸಲಿದ್ದು, ಕ್ವಾರ್ಟರ್ ಫೈನಲ್ ಪ್ರವೇಶಿಸಲು ಪೈಪೋಟಿ ನಡೆಸಲಿದೆ. ಸ್ಕೀಟ್ ಮಿಶ್ರತಂಡ ವಿಭಾಗದಲ್ಲಿ, ಭಾರತದ ಮಹೇಶ್ವರಿ ಚೌಹಾಣ್ ಮತ್ತು ಅನಂತಜೀತ್ ಸಿಂಗ್ ನರುಕಾ ಸ್ಪರ್ಧಿಸುತ್ತಿದ್ದಾರೆ. ಶ್ರೀಜಾ ಅಕುಲಾ, ಮನಿಕಾ ಬಾತ್ರಾ ಮತ್ತು ಅರ್ಚನಾ ಕಾಮತ್ ಒಳಗೊಂಡಿರುವ ಭಾರತೀಯ ಮಹಿಳಾ ಟೇಬಲ್ ಟೆನಿಸ್ ತಂಡ ೧೬ ರ ಸುತ್ತಿನ ಪಂದ್ಯದಲ್ಲಿ ಇಂದು ಮಧ್ಯಾಹ್ನ ೧.೩೦ಕ್ಕೆ ರೊಮೇನಿಯಾವನ್ನು ಎದುರಿಸಲಿದ್ದು, ಕ್ವಾರ್ಟರ್ ಫೈನಲ್‌ನಲ್ಲಿ ಸ್ಥಾನ ಪಡೆಯುವ ಗುರಿಯನ್ನು ಹೊಂದಿದೆ. ಅಥ್ಲೆಟಿಕ್ಸ್‌ನಲ್ಲಿ, ಮಹಿಳೆಯರ ೪೦೦ ಮೀ ಮೊದಲ ಸುತ್ತಿನಲ್ಲಿ ಕಿರಣ್ ಪಹಲ್ ಸ್ಪರ್ಧಿಸಲಿದ್ದು, ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಅವಿನಾಶ್ ಸೇಬಲ್, ೩ ಸಾವಿರ ಮೀಟರ್ ಸ್ಟೀಪಲ್‌ಚೇಸ್ ಫೈನಲ್‌ಗೆ ಅರ್ಹತೆ ಪಡೆಯಲು ಸೆಣಸಲಿದ್ದಾರೆ. ಕುಸ್ತಿಯಲ್ಲಿ, ನಿಶಾ ದಹಿಯಾ ಮಹಿಳೆಯರ ೬೮ ಕೆಜಿ ಫ್ರೀಸ್ಟೈಲ್ ಪ್ರಿ-ಕ್ವಾರ್ಟರ್‌ನಲ್ಲಿ ಭಾರತದ ಅಭಿಯಾನವನ್ನು ಆರಂಭಿಸಲಿದ್ದಾರೆ.

ಸೇಲಿಂಗ್‌ನಲ್ಲಿ, ವಿಷ್ಣು ಸರವಣನ್ ಮತ್ತು ನೇತ್ರಾ ಕುಮನನ್ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಡಿಂಗಿ ಸ್ಪರ್ಧೆಗಳಲ್ಲಿ ತಮ್ಮ ಅಭಿಯಾನ ಮುಂದುವರೆಸಲಿದ್ದಾರೆ. ಪ್ಯಾರಿಸ್ ೨೦೨೪ರ ಒಲಿಂಪಿಕ್ಸ್ ಸ್ಮರಣಾರ್ಥ ವಿಶೇಷ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ.

<><*<><>*><>

ಕೇಳುಗರ ಗಮನಕ್ಕೆ...

ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ಕ್ರೀಡಾಕೂಟದ ಪ್ರಸಾರದ ಹಿನ್ನೆಲೆಯಲ್ಲಿ ಬೆಳಗ್ಗೆ ೭-೩೫ಕ್ಕೆ ಪ್ರಸಾರವಾಗುತ್ತಿದ್ದ ರಾಷ್ಟ್ರೀಯ ವಾರ್ತೆಗಳು ಇದೇ ತಿಂಗಳ ೧೧ರವರೆಗೆ ಬೆಳಗ್ಗೆ ೯ ಗಂಟೆ ೫ ನಿಮಿಷಕ್ಕೆ ಪ್ರಸಾರವಾಗಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ೨.೩೦ ಕ್ಕೆ <>*><>